ಪ್ರತಿಬಿಂಬ

PRATIBIMBA – Multidisciplinary Kannada Research Journal of IIMRD
ISSN: 2582-2284
Vol-2 Issue 1, Jul-Aug 2020, 53-59
©IIMRD, Mysuru
IIMRD JOURNALS
www.iimrd.com

# ಶರಣ ಪರಂಪರೆಯ ಚಿಕ್ಕದಣ್ಣನಾಯಕ ಚೆನ್ನಬಸವಣ್ಣನ ವ್ಯಕ್ತಿತ್ವ

ಡಾ ಎಸ್. ಬಿ. ರಾಠೋಡ[1]

**ಪೀಠಿಕೆ**

ಹನ್ನೆರಡನೆಯ ಶತಮಾನವು ಮಹಾಜ್ಞಾನಿಗಳ, ಯುಗಪುರುಷರ, ಪವಾಡ ಪುರುಷರ, ಸಮಾಜ ಸುದಾರಕರ ಯುಗವೆಂದು ಕರೆಯಲಾಗುತ್ತದೆ. ಈ ಯುಗದ ಮಹಾಜ್ಞಾನಿಗಳ ಬಳಗದಲ್ಲಿ ಮಹಾಚೇತನ ಶಕ್ತಿಯಾಗಿ, ಧೃವ ನಕ್ಷತ್ರದಂತೆ ಮಿಂಚಿದಂತಹ ಅಕ್ಕನಾಗಮ್ಮ, ಶಿವದೇವ ದಂಪತಿಗಳ ಮಗನಾದ ಶ್ರೇಷ್ಠ ಜ್ಞಾನಿ ಚೆನ್ನಬಸವ. ಈತನು ಬಸವೇಶ್ವರನ ಸೋದರಳಿಯ, ಅಲ್ಲಮ ಪ್ರಭುವಿನಿಂದ 'ಮಹಾಜ್ಞಾನಿ' ಎಂದು ಹೊಗಳಿಸಿಕೊಂಡ ಶರಣ. ಈತನಿಗೂ ಜಾತವೇದಮುನಿಗಳಿಂದ ಶಿಕ್ಷಣ ದೊರೆತದ್ದು ವಿಶೇಷ. ಚೆನ್ನಬಸವನು ಕಲ್ಯಾಣದ ಅನುಭವ ಮಂಟಪದ ಆಧಾರ ಸ್ತಂಭಗಳಲ್ಲಿ ಒಂದಾದವನು ಎಂದು ಹೇಳಿದರೆ ತಪ್ಪಾಗಲಾರದು. ಭಕ್ತಿಭಂಡಾರಿ ಬಸವಣ್ಣನವರಾದರೆ, ಜ್ಞಾನಮೂರ್ತಿ ಅಲ್ಲಮ ಪ್ರಭುದೇವ, ಧಾರ್ಮಿಕ ಸಿದ್ಧಾಂತದ ಶಿಖಾಮಣಿ ಅಂದರೆ ಚೆನ್ನಬಸವಣ್ಣ ಎಂಬುವುದು ಎಲ್ಲ ವಿದ್ವಾಂಸರ ಅಭಿಮತ. ಇಡೀ ಶರಣ ಸಮುದಾಯ ಬಸವಣ್ಣನವರನ್ನು ದಣ್ಣನಾಯಕವೆಂದು ಕರೆದರೆ, ಚೆನ್ನಬಸವನನ್ನು ಚಿಕ್ಕದಣ್ಣನಾಯಕನೆಂದು ಕರೆದಿರುವುದು ಅವರ ವ್ಯಕ್ತಿತ್ವಕ್ಕೆ ಹಿಡಿದ ಕೈಗನ್ನಡಿ. ಚೆನ್ನಬಸಣ್ಣವರು ಧಾರ್ಮಿಕ ಸಿಂದ್ಧಾತದ ಕುರಿತು ಮೌಲಿಕ ಗ್ರಂಥಗಳನ್ನು ರಚಿಸಿರುವುದು ಕಾಣುತ್ತೇವೆ. 'ಷಟ್ಸ್ಥಲ ವಚನ ಹಾಗೂ ಬೇರೆ ವಚನಗಳು' 'ಕರಣ ಹಸುಗೆ' 'ಮಿಶ್ರಾರ್ಪಣೆ' 'ಮಂತ್ರಗೋಪ್ಯ' 'ಕಾಲಜ್ಞಾನ' 'ರುದ್ರಭಾರತದ ದೃಷ್ಠಿ' ಇವು ಬಹು ಮಹತ್ವ ಪಡೆದುಕೊಂಡಿವೆ.

**ಚೆನ್ನಬಸವಣ್ಣನ ಕುರಿತು ರಚಿತವಾದ ಕೃತಿ ಮತ್ತು ತಂದೆ, ತಾಯಿ**

ಈ ಯುಗದಲ್ಲಿ ಸುಪ್ರಸಿದ್ಧವಾದ ಶರಣರ ಕುರಿತು ಹಲವಾರು ಕವಿಗಳು ಹಲವಾರು ರೀತಿಯಲ್ಲಿ ಕೃತಿಗಳ ರಚನೆ ಮಾಡಿರುವುದು ಕಂಡುಬರುತ್ತದೆ. ಆದರೆ ಚೆನ್ನಬಸವಣ್ಣನವರ ಕುರಿತು ಬಹಳಷ್ಟು ಕೃತಿಗಳು ರಚಿತವಾಗದಿರುವುದೇ ವಿಷಾಧಿನಿಯ. ಶ್ರೇಷ್ಠ ರಗಳೆ–ಷಟ್ಪದಿ ಕವಿಗಳಾದ ಹರಿಹರ– ರಾಘವಾಂಕರು ಹಲವಾರು ಸುಪ್ರಸಿದ್ಧ ಶರಣರ ಚರಿತ್ರೆ ರಚನೆ ಮಾಡಿದರೂ, ಮಹಾಜ್ಞಾನಿ ಚೆನ್ನಬಸವನ ಮತ್ತು ಇತನ ತಾಯಿ ನಾಗಲಾಂಬಿಕೆಯ ಕುರಿತು ಅಪ್ಪಿ–ತಪ್ಪಿಯೂ ಎಲ್ಲಿ ಹೇಳಿಕೊಂಡಿಲ್ಲ. ಈ ಮೌನಕ್ಕೆ ಕಾರಣ ಏನು ತಿಳಿಯದು.

ಪುರಾಣ ಯುಗದ ಭೀಮಕವಿ ಕ್ರಿ.ಶ. 1368ರಲ್ಲಿ ಬಸವ ಪುರಾಣದಲ್ಲಿ ಚೆನ್ನಬಸವಣ್ಣನವರ ವಿಷಯ ಬಂದರೂ ತೀರ ಅನುಷಂಗಿಕ, ತೀರ ಸ್ವಲ್ಪ, ಶರಣ ಸಾಹಿತ್ಯ ಚರಿತ್ರೆಗಳ ಪುನರುಜ್ಜೀವನ ಸಂದರ್ಭವಾದ ಹದಿನೈದನೆಯ ಶತಮಾನದಲ್ಲಿಯೂ ಚೆನ್ನಬಸವಣ್ಣನವರನ್ನು ಕುರಿತು ಸ್ವತಂತ್ರ ಕೃತಿ

*1 ಮುಖ್ಯಸ್ಥರು, ಕನ್ನಡ ವಿಭಾಗ ಹಾಗೂ ಸಂಶೋಧನಾ ಮಾರ್ಗದರ್ಶಕರು, ಎಸ್.ಎಸ್. ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯ, ಚಡಚಣ–586205.*

ಹುಟ್ಟದಿರುವುದು ಆಶ್ಚರ್ಯದ ಸಂಗತಿ. ಇದನ್ನು ಗಮನಿಸಿದ ವಿರೂಪಾಕ್ಷ ಪಂಡಿತರು 1584 ರಲ್ಲಿ ತನ್ನ ಚೆನ್ನಬಸವ ಪುರಾಣದಲ್ಲಿ "ಧರೆಯೊಳಗೆ ಸಕಲ ಶರಣರ ಕಥೆಗಳಂ ಕವಿಶ್ವರರೊಲ್ದು ಪೇಳ್ದರೀ ಚೆನ್ನಬಸವೇಶ್ವರನ ಚರಿತೆಯನದೊರ್ವರುಂ ಪೇಳ್ದುದಿಲ್ಲ" ಎಂದು ಪೀಠಿಕೆ ಹಾಕಿಕೊಂಡು. 1584 ರಲ್ಲಿ ಚೆನ್ನಬಸವನ ಕುರಿತು ಕೃತಿ ರಚಿಸಿರುವುದು ಕಂಡುಬರುತ್ತದೆ.[1] ಇತನನ್ನು ಬಿಟ್ಟರೆ ಮುಂದೆ ಮತ್ತೆ ಯಾರು ಚೆನ್ನಬಸವನ ಕುರಿತು ಕಾವ್ಯ ರಚಿಸಲು ಆಸಕ್ತಿ ತೋರಿಸದಿರುವು ಸ್ಪಷ್ಠವಾಗಿ ಗೊಚರಿಸುತ್ತದೆ.

ಚೆನ್ನಬಸವಣ್ಣನವರ ತಾಯಿ ಕುರಿತು ವಿದ್ವಾಂಸರಿಲ್ಲಿ ಹಲವಾರು ಬಿನ್ನಾಭಿಪ್ರಾಯ ಇದ್ದರೂ, ಎಲ್ಲ ವೀರಶೈವ ಕೃತಿಗಳ ಆಧಾರಿತವಾಗಿ ಏಕಮತದಿಂದ ನಾಗಲಾಂಬಿಕೆಯೇ ಇವರ ತಾಯಿ ಎಂದು ಒಪ್ಪಿಗೆ ಸೂಚಿಸುತ್ತವೆ. ಸ್ವತ: ಚೆನ್ನಬಸವನು ನಾಗಲಾಂಬಿಕೆಯನ್ನು "ಅವ್ವೆ" ಎಂದು ಕರೆದಿರುವುದು ವಚನಗಳಲ್ಲಿ ಉಲ್ಲೇಖವಿದೆ. ಬಹುಮುಖ್ಯ ಸಂಗತಿ ಅಂದರೆ ಘಟ್ಟಿವಾಳ್ಯನ ವಚನವೊಂದು ಸಾಕ್ಷಿಯಾಗಿ ನಿಲ್ಲುತ್ತದೆ.

*ಕರವೂರ ನಿರಂಹಕಾರ–ಸುಜ್ಞಾನಿದೇವಿಯರ*

*ಬಸುರಲ್ಲಿ ಬಂದರೆನ್ನಬಹುದೇ ಪ್ರಭುದೇವರು?*

*ಮಂಡಿಗೆಯ ಮಾದಿರಾಜ–ಮಾದಲಾಂಬಿಕೆಯಮ್ಮನವರ*

*ಬಸುರಲ್ಲಿ ಬಂದರೆನ್ನಬಹುದೇ ಬಸವೇಶ್ವವರರು?*

*ಅಕ್ಕನಾಗಲಾಂಬಿಕೆಯಮ್ಮನವರ ಬಸುರಲ್ಲಿ*

*ಬಂದರೆನ್ನಬಹುದೇ ಚೆನ್ನಬಸವೇಶ್ವರರು?*

*ಮೊರಡಿಯ ಮದ್ದೆಗೌಡ–ಸುಗ್ಗಲೆಯ*

*ಬಸುರಲ್ಲಿ ಬಂದರೆನ್ನಬಹುದೇ ಸಿದ್ಧರಾಮೇಶ್ವರರು?*

*ಇವರು ಒಬ್ಬರಿಂದಾವರಲ್ಲ, ತಮ್ಮಿಂದ ತಾವಾದರು*

*ಚಿಕ್ಕಯ್ಯ ಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ನಿಲ್ಲು ಮಾಣು.*

ಈ ಮೇಲಿನ ವಚನದಲ್ಲಿ ಚೆನ್ನಬಸವಣ್ಣನ ತಾಯಿ ನಾಗಲಾಂಬಿಕೆ ಎಂಬುವುದು ಸ್ಪಷ್ಟವಾಗಿ ತಿಳಿದುಬರುತ್ತದೆ. ಆದರೆ ಚೆನ್ನಬಸವಣ್ಣನವರ ತಂದೆ ಶಿವದೇವ ಎಂಬುವುದು ಇತ್ತೀಚಿನ ಸಿಂಗಿರಾಜನ 'ಸಿಂಗಿರಾಜ ಪುರಾಣ' ದಲ್ಲಿ ಮತ್ತು ಇತ್ತಿಚಿನ ದೇವಾಂಗ ದಾಸಿಮಯ್ಯನ ಪುರಾಣದಲ್ಲಿ ಉಲ್ಲೇಖ ಗೊಂಡಿರುತ್ತದೆ. ಸಿಂಗಿರಾಜಪುರಾಣವು ವಿಜಯನಗರ ಸಾಮ್ರಾಜ್ಯ ಪತನವಾದ ಬಳಿಕ ಅಂದರೆ 16ನೆಯ ಶತಮಾನದ ಪ್ರಾರಂಭದಲ್ಲಿ ಬರೆದ ಕೃತಿಯೆಂದು ಆಂತರಿಕ ಆಧಾರಗಳಿಂದ ಶ್ರೀ ಎಚ್. ದೇವೀರಪ್ಪನವರು ಪ್ರತಿಪಾದಿಸಿರುವುದು ಸರಿಯೆಂದು ತೋರುತ್ತದೆ. ನಾಲ್ಕುನೂರು ವರ್ಷ ಎಲ್ಲ ಕಾವ್ಯಗಳು ಮೌನ ತಾಳಿರುವಾಗಗ ಸಿಂಗಿರಾಜ ಪುರಾಣ ಮಾತ್ರ ತಡವಾಗಿ ಚೆನ್ನಬಸವಣ್ಣನವರ ತಂದೆಯ ಹೆಸರು ಶಿವದೇವವೆಂದು ಉಲ್ಲೆಖಿಸಿದೆ.[2]

ಕಲ್ಯಾಣದ ಮಹಾಕ್ರಾಂತಿಯಲ್ಲಿ ಇತನೂ ಕೂಡ ಪ್ರಮುಖ ಪಾತ್ರದಾರಿ. 24 ವರ್ಷ ಪ್ರಾಯದ ಚೆನ್ನಬಸವಣ್ಣ ದಂಡಿನ ನಾಯಕನಾಗಿ ಹಲವಾರು ಶರಣರ ಪ್ರಾಣ ರಕ್ಷಣೆಯ ಜವ್ದಾರಿಯು ಹೊತ್ತಿ. ಉಳಿವೆ ಕಡೆ ಶರಣರನ್ನೂ ಕರೆದುಕೊಂಡು ಹೋದದ್ದು ಹಲವಾರು ಕೃತಿಗಳು ಸಾಕ್ಷಿಯಾಗಿ ನಿಲ್ಲುತ್ತವೆ. ಚೆನ್ನಬಸವಣ್ಣನವರ ಜೀವನದ ಕುರಿತು ಮತ್ತು ತಂದೆ, ತಾಯಿ ಕುರಿತು ಎರಡು ಕಾವ್ಯಗಳು ಗಟ್ಟಿಯಾಗಿ ನಿಲ್ಲುತ್ತವೆ. ಒಂದು ವಿರೂಪಾಕ್ಷ ಪಂಡಿತರ 'ಚೆನ್ನಬಸವ ಪುರಾಣ' ಇನ್ನೊಂದು ಸಿಂಗಿರಾಜನ 'ಸಿಂಗಿರಾಜ ಪುರಾಣ'

**ಶರಣರ ದೃಷ್ಠಿಯಲ್ಲಿ ಚೆನ್ನಬಸವನ ವ್ಯಕ್ತಿತ್ವ**

ಚೆನ್ನಬಸವಣ್ಣನಿಗೆ ಶರಣರ ಗುಂಪಿನಲ್ಲೆಲ್ಲಾ ಒಂದು ವಿಶಿಷ್ಠ ಸ್ಥಾನವಿತ್ತು. ಆತನ ವಚನಗಳಲ್ಲಿ ವೀರಶೈವ ಸಿದ್ಧಾಂತ ನಿರೂಪಣೆಗೆ ಹೆಚ್ಚು ಗಮನವನ್ನು ಕೊಟ್ಟು, ಶಾಸ್ತ್ರಸಮ್ಮತವಾದ ರೀತಿಯಲ್ಲಿ ಅದನ್ನು ಪ್ರತಿಪಾದಿಸಿರುವದನ್ನು ಕಾಣುತ್ತೆವೆ. ಆ ಸಿದ್ಧಾಂತದ ಮಾರ್ಗದಲ್ಲಿ ನಡೆದು ಸಂಪ್ರದಾಯಕ್ಕೆ ಅತೀತವಾದ ವಿಶ್ವ ವ್ಯಕ್ತಿತ್ವದ ವಿಸ್ತಾರವನ್ನು ಪಡೆದ ಯಾವುದೇ ತತ್ವ ಸಿದ್ಧಾಂತ ಸಾರ್ಥಕವಾಗಬೇಕಾದರೆ ಅದರ ಆಚರಣೆಯಿಂದ ಅಂತರಂಗದ ಕಣ್ಣು ತೆರೆದು ಅನುಭಾವ ಕೈಗೂಡಬೇಕೆಂದು ಧರ್ಮದ ಅಂದ ಆಚರಣೆಗಳನ್ನು, ಆಡಂಬರದ ವೇಷವನ್ನು ಖಂಡಿಸುತ್ತಾನೆ.

*ವೃಕ್ಷವಾಸಿಯಾಗಿರ್ದು, ಭಿಕ್ಷಪರಿಣಾಮಿಯಾಗಿರ್ದರೇನು?*

*ಉಟ್ಟುದನಳಿದು ಬತ್ತಲೆಯಾದರೇನು?*

*ಕಾಲರಹಿತನಾದರೇನು? ಕರ್ಮರಹಿತನಾದರೇನು*

*ಕೂಡಲಚೆನ್ನನ ಅನುಭಾವವರಿಯದವರು*

*ಏಸುಕಾಲ ಇರ್ದರೇನು? ವ್ಯರ್ಥಕಾಣಿರೋ*

ಚೆನ್ನಬಸವಣ್ಣನವರು ವಿಶ್ವಪೂಜೆಯ ವೈಭವವನ್ನು ಈ ಕೇಳಗಿನ ವಚನದಲ್ಲಿ ವ್ಯಕ್ತಪಡಿಸಿದ್ದು ಹೀಗೆ

***ಕಂದದ ಹೂವನೆ ಕೊಯ್ದು, ನೊಂದದಾರತಿಯ ಬೆಳಗಿ***

***ಅಂದವಳಿಯದೆ, ಬಿಂದು ತುಳುಕದೆ, ನಂದಿ ಮುಂದುಗೆಡದೆ ಮುನ್ನವೆ,***

***ಕಂದದ ಹೂವಿನ ಪೂಜೆಯ ಲಿಂಗಮಧ್ಯವ ತಿಳಿದುನೋಡಿ***

***ಮೇಲುಗಿರಿಯ ಮೇಲೆ ಆಕಳದ ಕ್ಷೀರದಲ್ಲಿ ಅಡಿಗೆಯನೆ ಮಾಡಿ***

***ನಮ್ಮ ಕೂಡಲಚೆನ್ನ ಸಂಗಯ್ಯನೆಂಬ ಲಿಂಗಕ್ಕೆ ಆರೋಗಣೆಯ ಸಮೆಯ?***

ಬಾಡದಿರುವ ಹೂವನ್ನು ಕೊಯ್ದು ಅಂದಮಳಿಯದ ರೀತಿಯಲ್ಲಿ ಪೂಜಿಸಬೇಕಂತೆ! ಶಿವಯೋಗದ ಸತತ ಸಾಧನೆಯೆಂಬ ಆಕಳ ಹಾಲಿನಿಂದ ಆಡುಗೆಮಾಡಿ ಆರೋಗಣೆಯನ್ನು ಸಮರ್ಪಿಸಬೇಕಂತೆ! ಶಿವ ಬಯಸುವುದು ಆ ರೀತಿಯ ನಿಮ್ಮ ಮನೋಪುಷ್ಪದ ಪೂಜೆಯನ್ನು, ಆ ಆರೋಗಣೆಯನ್ನು. ಹೀಗೆ ಪುಜಿಸಬಲ್ಲ ಭಕ್ತನ ವರ್ತನೆಯೆಲ್ಲಿ ಪೂಜೆಯಾಗಿ ಪರಿಣಸುತ್ತದೆ.

ಇಂತಹ ಅದ್ಭುತವಾದ ಸಾಧನ ಶಕ್ತಿ ಚೆನ್ನಬಸವಣ್ಣನಲ್ಲಿತ್ತು. 'ನೀನು ಕಾಯವಿಡಿದು ಕಲ್ಪತವ ಹೊದ್ದೆನೆಂಬುದು ಕಾಣಬಂದಿತ್ತು ನೋಡಾ ಚೆನ್ನಬಸವ' ಎಂದು ಅಲ್ಲಮಪ್ರಭು ಚೆನ್ನಬಸವನನ್ನು ಕುರಿತು ಹೇಳಿದ ಮಾತು ಅವರ ವ್ಯಕ್ತಿತ್ವಕ್ಕೆ ಕೈಗನ್ನಡಿಯಂತಿದೆ. ಇದೇ ಅಭಿಪ್ರಾಯವನ್ನು ಇನ್ನೊಂದು ಕಡೆ ಇನ್ನೂ ಸ್ಪಷ್ಟವಾಗಿ ವಿವರಿಸಿ ಹೇಳಿ ಚೆನ್ನಬಸವಣ್ಣನ ನಿಲವುವನ್ನು ವ್ಯಕ್ತಪಡಿಸಿದ್ದಾನೆ, ಪ್ರಭುದೇವ!

***ತನುವ ಗುರುವಿಂಗೆ ಸಮರ್ಪಿಸಿ, ಮನವ ಲಿಂಗಕ್ಕೆ ಸಮರ್ಪಿಸಿ***

***ಭಾವವ ಜಂಗಮಕ್ಕೆ ಸಮರ್ಪಿಸಿ ನಿಜವ ತೃಪ್ತಿಯಲರ್ಪಿಸಿ***

***ಘನವನರಿವಿಂಗರ್ಪಿಸಿ ಅರ್ಪಿತವೆ ಅನರ್ಪಿತವಾಗಿ***

***ಅನರ್ಪಿತವೆ ಅರ್ಪಿತವಾಗಿ, ಅರ್ಪಿತ ಅನಅರ್ಪಿತಂಗಳಳಿದು***

***ನಿತ್ಯಪ್ರಸಾದಿಯಾಗಿ, ಪ್ರಸಾದದ ಹಾದಿಯನೆಲ್ಲರಿಗೆ ತೀರಿ***

***ಮಹಪ್ರಸಾದದ ಬೆಳೆವಿಗೆಯ ಮಾಡಿದನು ಗುಹೇಶ್ವರನ ಶರಣ ಚೆನ್ನಬಸವಣ್ಣನು.***

ಎಂದು ಹಾಡಿ ಹೊಗಳಿದ್ದಾನೆ ಚೆನ್ನಬಸವನನ್ನು. ಚೆನ್ನಬಸವನ ಸಾಧನೆಯ ಮಾರ್ಗವೇನೆಂಬುದೂ ಇವರಿಂದ ವ್ಯಕ್ತವಾಗುತ್ತದೆ.

**ಜ್ಞಾನಕ್ಕೆ ಹಿರಿ–ಕಿರಿದುಂಟೇ**

ಚೆನ್ನಬಸವಣ್ಣ ತನ್ನ ವಯಸ್ಸಿಗೆ ಮೀರಿ ಮಹಾಜ್ಞಾನವನ್ನು ಪಡೆದವನೆಂದು ಇಡೀ ಶರಣ ಬಳಗವೇ ಹಾಡಿ ಹೋಗಳತ್ತಿದ್ದದ್ದು, ಪ್ರಭುದೇವರಲ್ಲದೆ ಎಲ್ಲ ಶರಣರ ಅಭಿಮತ.

**ಕಿರಿಯರಾದಡೇನು? ಹಿರಿಯರಾದಡೇನು?**

**ಅರಿವಿಂಗೆ ಹಿರಿದು ಕಿರಿದುಂಟೇ**

**ಆದಿಯನಾದಿ ಇಲ್ಲಿದಂದು, ಆಜಾಂಡ ಬ್ರಹ್ಮಾಂಡ**

**ಕೋಟಿಗಳೂ ಉದಯವಾಗದಂದು,**

**ಗುಹೇಶ್ವರ ಲಿಂಗದಲ್ಲಿ ನೀನೋಬ್ಬನೇ ಮಹಾಜ್ಞಾನಿಯೆಂಬುದು**

**ಕಾಣಬಂದಿತ್ತು ಕಾಣಾ ಚೆನ್ನಬಸವಣ್ಣ.**

ಎಂದು ಪ್ರಭುದೇವನೇ ಮೆಚ್ಚಬೇಕಾದರೆ ಅವನ ಜ್ಞಾನದ ಮಟ್ಟವೇನೆಂಬುದನ್ನು ಕಂಡುಕೊಳ್ಳಬಹುದು. ಅನೇಕ ಸಂದರ್ಭಗಳಲ್ಲಿ ಬಸವಣ್ಣನವರನ್ನು ಕೂಡ ಎಚ್ಚರಿಸಿ ಅವರ ಸಾಧನೆಯಲ್ಲಿ ಮಾರ್ಗದರ್ಶಕನಾಗುತ್ತಿದ್ದನು. ಇದಕ್ಕೆ ಒಂದು ಸನ್ನಿವೇಶವನ್ನು ಉದಾಹರಣೆಯಾಗಿ ತೆಗೆದುಕೊಳ್ಳಬಹುದು.

ಪ್ರಭುದೇವನ ಆರೋಗಣೆನೆಯ ಸಂದರ್ಭದಲ್ಲಿ ಬಸವೇಶ್ವರನ ಭಕ್ತಿಗೆ ಸ್ವಲ್ಪ ಅಹಂಕಾರದ ಮೊಳಕೆ ತಲೆದೋರುತ್ತದೆ. 'ಏನನ್ನು ಕೇಳಿದರೂ ಕೊಟ್ಟು ಪ್ರಭುದೇವನನ್ನು ನಾನು ತೃಪ್ತಿಪಡಿಸಬಲ್ಲೆ' ಎಂಬ ಭ್ರಾಂತಿ ಉಂಟಾಗುತ್ತದೆ. ಅವನ ಅಹಂಕಾರವನ್ನು ಮುರಿಯಲು ಪ್ರಭು ಎಷ್ಟೂ ತಿಂದರೂ ತೃಪ್ತಿಯಾಗದವನಂತೆ

ವರ್ತಿಸುತ್ತಾನೆ. ಅವನನ್ನು ತೃಪ್ತಿಪಡಿಸುವ ಬಗೆಯನ್ನರಿಯದೆ ಬಸವಣ್ಣ ಕಂಗೆಡಲು ಚೆನ್ನಬಸವಣ್ಣ ಹೇಳುವ ಮಾತು ಮನೋಜ್ಞಾವಾಗಿದೆ. 'ಈರೇಳು ಭುವನನೊಳಕೊಂಡ ಮಹಾಘನಕ್ಕೆ ಸುಯಿಧಾನವ ನೀಡಿಹೆನೆಂಬ ಸ್ವಾಮಿಯ ಮರುಳುತನವೇನೆಂಬೇನು ? ಕೂಡಲಚೆನ್ನ ಸಂಗಮದೇವರ ತೃಪ್ತಿಯ ತೆರೆನೊಲಿದರೆ, ನೀವು ಬೋನ ನಾನು ಪದಾರ್ಥ, ಇದರಿಂದ ಮೇಲೇನೂ ಘನವಿಲ್ಲ ಕಾಣ ಸಂಗನ ಬಸವಣ್ಣಾ' ಎನ್ನುತ್ತಾನೆ. ನಮ್ಮ ತನುವನ್ನು ಸಂಪೂರ್ಣವಾಗಿ ಸ್ವಾಮಿಯ ಪಾದದಲ್ಲಿ ಅರ್ಪಿಸಿದರೆ ಅದೇ ಎಲ್ಲಕ್ಕೂ, ಹೆಚ್ಚಿನ ಪ್ರಸಾದ. ಹಾಗೆ ಚೆನ್ನಬಸವಣ್ಣ ಜ್ಞಾನಮಾರ್ಗದಿಂದ ತನ್ನ ಸರ್ವಸ್ವವನ್ನೂ ಅವನ ಪಾದದಲ್ಲಿ ಅರ್ಪಿಸಿದನು. 'ಜಲವಿಲ್ಲದ ಜಲದಲ್ಲಿ ಪಾದಾರ್ಚನೆಯ ಮಾಡಿ ಪಾದೋದಕವನ್ನು ಕೊಂಡವನು. ಈ ಪ್ರಪಂಚವೇ ಒಂದು ಶಿವನ ಪ್ರಸಾದವೆಂದು ಎಲ್ಲೆಲ್ಲಿಯೂ ಅವನ ಪ್ರಸಾದವನ್ನೇ ಕಂಡುಕೊಂಡ ಪ್ರಸಾದಿಯಾತ. ತನು, ಮನ ಭಾವಗಳನ್ನು ಬಯಲುಮಾಡಿ, ಬಯಲಲ್ಲಿ ಬಯಲು ಬೆರೆತಂತೆ ಈ ವಿಶ್ವದಲ್ಲಿ ಲೀನನಾದವನು.

*ಪ್ರಭುದೇವರು ಮತ್ತೊಂದು ವಚನದಲ್ಲಿ ಚೆನ್ನಬಸವನನ್ನು ಕುರಿತು ಹೀಗೆ ಹೇಳುತ್ತಾನೆ.*

*ನರಲೋಕದ ನರರುಗಳೆಲ್ಲರೂ, ನರಸಂಸಾರಕ್ಕೊಳಗಾದರು*

*ಸುರಲೋಕದ ಸುರರುಗಳೆಲ್ಲರೂ, ಸುರಸಂಸಾರಕ್ಕೊಳಗಾದರು*

*ಮುನಿಲೋಕದ ಮುನಿಗಳೆಲ್ಲರೂ, ತಪೂಸಂಸಾರಕ್ಕೊಳಗಾದರು*

*ಜಂಗಮನ ಪೂಜಿಸುವವರೆಲ್ಲರೂ, ಸಾಯುಜ್ಯ ಸಂಸಾರಕ್ಕೊಳಗಾದರು*

*ರುದ್ರಲೋಕದ ರುದ್ರಗಣಂಗಳೆಲ್ಲರೂ, ರುದ್ರಪದವೆಂಬ ಸಂಸಾರಕ್ಕೊಳಗಾದರು*

*ಲಿಂಗವ ಧರಿಸಿದವರೆಲ್ಲರೂ ಲಿಂಗಸಂಸಾರಕ್ಕೊಳಗಾದರು*

*ಪ್ರಸಾದ ಪಾದೋದಕ ಸಂಬಂಧಿಗಳೆಲ್ಲರೂ ಪ್ರಸಾದ ಸಂಸಾರಕ್ಕೊಳಗಾದರು*

*ಗುಹೇಶ್ವರ ಲಿಂಗದಲ್ಲಿ ಸಂಸಾರ ವಿರಹಿತನು*

*ಚೆನ್ನಬಸಣ್ಣಂಗೆ ನಮೋ ನಮೋ ಎಂಬೆನು.*

ನರರು, ಸುರರು, ಮುನಿಗಳು, ಸಾಧಕರು, ಎಲ್ಲರೂ ಒಂದಲ್ಲ ಒಂದು ರೀತಿಯ ಸಂಸಾರಕ್ಕೆ ಒಳಗಾಗಿಯೇ ಇದ್ದಾರೆ. ಯಾವುದು ಬಿಡುಗಡೆಯ ಸಾಧನವಾಗಬಹುದೋ ಅದೇ ಅನೇಕ ಸಂದರ್ಭಗಳಲ್ಲಿ ಬಂಧನದ ಬೇಡಿಯಾಗುತ್ತದೆ. ಸಾಧಕ ತನ್ನ ಬಿಡುಗಡೆಯ ಅವಶ್ಯಕತೆಯ ಮಟ್ಟಿಗೆ ಅವುಗಳನ್ನು ಉಪಯೋಗಿಸಿಕೊಂಡು ಅವುಗಳಿಂದ ಮೇಲೇರಬೇಕಾಗುತ್ತದೆ. ಹಾಗೆ ಮೇಲೇರಿದವನ್ನು ಪ್ರಭುದೇವ. ಭಕ್ತಿ ಪ್ರಭುದೇವನ ತೀವ್ರ ವೈರಾಗ್ಯ, ಚೆನ್ನಬಸವನ ಜ್ಞಾನ–ಎಲ್ಲವೂ ಒಂದೇ ನಿಲುವಿಗೆ ಇವರನ್ನು ತಂದಿತು. ಅವರೆಲ್ಲರೂ ತತ್ವತ ಒಂದೇ ಆಗಿ ಪರಿಣಮಿಸಿದರು. ಆದುದರಿಂದ ಪ್ರಭು, ಚೆನ್ನಬಸವಣ್ಣನನ್ನು ಹೊಗಳುವುದಾದಲ್ಲೀ ಬಸವೇಶ್ವರನು ಅವನನ್ನು ಸ್ತುತಿಸುವುದಾಗಲೀ ಅವರಿಗಿಂತ ಇವನು ದೊಡ್ಡವನೆಂದು ತೋರಿಸುವುದಕ್ಕೆಲ್ಲ.

*ಎನ್ನ ಕಾಯದ ಕತ್ತಲೆ ಹಿಂಗಿತ್ತು ಚೆನ್ನಬಸವಣ್ಣಾ ।*

*ಇಂದಿನಲ್ಲಿ ಎನ್ನ ತನು ಮನ ಧನ ಲೋಭವಳಿದು ತಲೆವೆಳಗಾಯಿತ್ತು.*

*ಇಂದಿನಲ್ಲಿ ಎನ್ನನೆಡೆಗೊಂಡ ಅಹಂಕಾರ ನಿರ್ವಯಲಾಯಿತ್ತು*

*ಇಂದಿನಲ್ಲಿ ಕೂಡಲ ಸಂಗಮದೇವರ ತೃಪ್ತಿಯ ತೆರೆನ*

*ನೀನು ತೋರಿದೆಯಾಗಿ ನಾನು ಬದುಕಿದನು ಕಾಣಾ ಚೆನ್ನಬಸವಣ್ಣಾ.*

ಸಂಸಾರದ ಜಾಡ್ಯವನ್ನು ಅಲ್ಲವೆನಿಸಿದ ಅಲ್ಲಮ ಪ್ರಭುದೇವ ಚೆನ್ನಬಸವೇಶ್ವರನ್ನು ಕುರಿತು ಹೊಗಳಿರುವುದು ಎಂಥಹ ಅದ್ಭುತ. ಚೆನ್ನಬಸವಣ್ಣ ಬಸವೇಶ್ವರನನ್ನು ಶ್ರೀಗುರುವೆಂದು ಅಂಗೀಕರಿಸಿ 'ಅಂತರಂಗ ಬಹಿರಂಗವ ಹತವ ಮಾಡಿದನಯ್ಯ ಎನ್ನ ಶ್ರೀಗುರುವೆಂದು ಬಸವಣ್ಣನು' ಬಸವಣ್ಣನಿಂದ ಸರ್ವಾಂಗಲಿಂಗಿಯಾದೆನು. ಶರಣ ಬಸವಣ್ಣ ಎನ್ನ ಭಾವಕಲ್ಪಿತವ ಕಳೆದನು. 'ಕೂಡಲ ಚೆನ್ನಸಂಗಯ್ಯನೆಂಬ ಲಿಂಗವ ತೋರಿದ ಬಸವಣ್ಣ ಗುರುವೇ ಶರಣು' ಎಂದು ಅನೇಕ ಪರಿಯಲ್ಲಿ ಸ್ತುತಿಸಿರುವುದನ್ನು ಇನ್ನೊಂದು ಕಡೆ ಕಾಣುತ್ತೇವೆ. ಇವರ ಸಾಧನೆ ಪರಸ್ಪರ ಪೂರಕವಾಯಿತು. ಮತ್ತು ಆ ಕೊನೆಯ ನಿಲುವಿನಲ್ಲಿ ಇಬ್ಬರು ಒಂದೇ ಆಗಿ ಪರಿಣಮಿಸಿದರು. ಒಬ್ಬರನ್ನೊಬ್ಬರು ಹೊಗಳಿದರೂ ಆ ಹೊಗಳಿಕೆಯನ್ನು ಇಬ್ಬರೂ ಮೀರಿ ನಿಂತವರು. ಪ್ರಭುದೇವನು ಬಸವೇಶ್ವನನ್ನೂ ಚೆನ್ನಬಸವನನ್ನೂ ಹೊಗಳುವುದನ್ನಾಗಲ್ಲೀ, ಅವರಿಬ್ಬರೂ ಪ್ರಭುವನ್ನು ಸ್ತೂತಿಸುವುದನ್ನಾಗಲೀ ಈ ಅರ್ಥದಲ್ಲಿಯೇ ತೆಗೆದಕೊಳ್ಳಬೇಕಾಗುತ್ತದೆ.

ಬಸವಣ್ಣ, ಚೆನ್ನಬಸವಣ್ಣ ಮತ್ತು ಶರಣರೆಲ್ಲರೂ ಏಕಕಂಠದಿಂದ ಪ್ರಭುವಿನ ಸ್ತೋತ್ರವನ್ನು ಮಾಡಿರುವುದು ಪ್ರಸಿದ್ಧವೇ ಆಗಿದೆ. ಕಲ್ಯಾಣಕ್ಕೆ ಬರುವಾಗಲೇ ಪ್ರಭು ಆ ನಿಲುವನ್ನು ತಳೆದು ಬಂದವನು. 'ದಳವಿಲ್ಲದ ಕುಸುಮದ ಗದ್ದುಗೆಯಲ್ಲಿ, ಒಡಲಿಲ್ಲದ ಘನವು ಮೂರ್ತಿಗೊಂಡಿರೆ ವಿಚಿತ್ರವಾಯಿತು ಜಗವೆಲ್ಲಾ, ಕೂಡಲಸಂಗಮದೇವರ ಶರಣ ಪ್ರಭುದೇವರ ಶ್ರೀಪಾದಕ್ಕೆ ನಮೋ ನಮೋ ಎಂಬೆನು ?– ಎಂದು ಬಸವಣ್ಣ ಒಡಲಿಲ್ಲದ ಆ ಶೂನ್ಯ ಮೂರ್ತಿಯನ್ನು ಶೂನ್ಯ ಸಿಂಹಾಸನದಲ್ಲಿ ಕುಳ್ಳಿರಿಸಿ ಆರ್ಚಿಸಿದನು. ಇಂತಹ ಪ್ರಭುದೇವನು ಕೂಡ ಬಸವಣ್ಣನನ್ನು ಕುರಿತು, ನಿನ್ನ ಮಹಾಮನೆಯ ಕಾವಲಬಂಟ ನಾನು. 'ಸಂಗನ ಬಸವಣ್ಣನಿಂದ ಎನ್ನಂಗ ಬಯಲಾಯಿತು, ಶರಣ ಸಂಗನ ಬಸವಣ್ಣನ ಮರೆಯ ಹೊಕ್ಕು ಬದುಕಿದೆನು' ಎಂದು ಮುಂತ್ತಾಗಿ ಹೇಳುವುದನ್ನೂ, ಚೆನ್ನಬಸವಣ್ಣನಿಂದಲಾನು ಬದುಕಿದೇನು' ಎಂದು ಮೊದಲಾಗಿ ಚೆನ್ನಬಸವಣ್ಣನನ್ನು ಸ್ತುತಿಸುವುದನ್ನು ಕಂಡಾಗ ಆಶ್ಚರ್ಯವಾಗುತ್ತದೆ. ಇದರಿಂದ ಗೋಚರಿಸುವುದೇನೆಂದರೆ ಪ್ರಭುದೇವನ ನಿಲುವಿಗೆ ಬಸವ, ಚೆನ್ನಬಸವರು ಏರಿದರು. ಹೀಗೆ ಈ ಮೂವರು ಬೇರೆ ಬೇರೆಯಗಿ ಉಳಿಯದೆ ಏಕರೂಪಿಯಾಗಿ ಪ್ರಭುವಿನ ದೃಷ್ಟಿಯಲ್ಲಿ ತೋರುವವರು ಅದಕ್ಕಾಗಿಯೇ ಹೇಳುವುದು 'ಜ್ಞಾನಕ್ಕೆ ಹಿರಿ–ಕಿರಿದುಂಟೆ' ಶರಣರ ಬಳಗದಲ್ಲಿ ಅತೀ ಕಿರಿಯನಾದ ಚೆನ್ನಬಸವಣ್ಣ ಜ್ಞಾನ ಹಿರಿತನಕ್ಕೆ ದಾರಿತೋರಿದ್ದು ಕಾಣುತ್ತವೆ.

**ಉಪಸಂಹಾರ**

ಹೀಗೆ ಶರಣರ ಬಳಗದಲ್ಲಿ ಅತಿ ಕಿರಿಯನಾದರು, ಜ್ಞಾನದಲ್ಲಿ ಹಿರಿಯನಾಗಿ, ಕಲ್ಯಾಣದ ಕ್ರಾಂತಿಕಾರಿ ಶರಣರ ಮಧ್ಯವಿದ್ದು, ಶರಣರ ಶರಣನಾದ ಅಲ್ಲಮಪ್ರಭುವಿನಿಂದ ಹೊಗಳಿಸಿಕೊಂಡು, ಚಿಕ್ಕದಣ್ಣನಾಯಕನ ಪದವಿ ಪಡೆದು, ಸಿದ್ಧರಾಮನಿಗೆ ಲಿಂಗದೀಕ್ಷೆ ಕೊಟ್ಟು, ಧಾರ್ಮಿಕ ಸಿದ್ಧಾಂತದ ಶಿಖರವೇರಿದ ಕೀರ್ತಿ ಚೆನ್ನಬಸವಣ್ಣನವರಿಗೆ ಸಲ್ಲುತ್ತದೆ. ಇಂದಿಗೂ ಉಳಿವೆಕ್ಷೇತ್ರದಲ್ಲಿ ಚೆನ್ನಬಸವನ ಐಕ್ಯವಾದ ಜಾಗೃತ ಸಮಾದಿ ಪೂಜೆಗೋಳ್ಳುತ್ತದೆ.

**ಕೊನೆಟಿಪ್ಪಣೆ**

---

1. ಕಲಬುರ್ಗಿ ಎಂ.ಎಂ. (1998). ಮಾರ್ಗ–3. ಕರ್ನಾಟಕ ಬುಕ್ ಏಜೆನ್ಸಿ, ಬೆಂಗಳೂರು. ಪು.ಸಂ.315.
2. ಮೇಲಿನದೆ., ಪು.ಸಂ.320.

**ಪರಾಮರ್ಶನ ಗ್ರಂಥಗಳು**


- ತಿಪ್ಪೇರುದ್ರಸ್ವಾಮಿ ಎಚ್. (1998). ಶರಣರ ಅನುಭಾವ ಸಾಹಿತ್ಯ. ಡಿ.ವಿ.ಕೆ. ಮೂರ್ತಿ ಪ್ರಕಾಶನ. ಮೈಸೂರು.
- ಗೋಪಾಲ್ ಕೆ.ಎಸ್. (2009). ಹರಿಹರ ಕವಿಯ ಬಸವರಾಜದೇವರ ರಗಳೆ. ಸಮಾಜ ಪುಸ್ತಕಾಲಯ, ಶಿವಾಜಿ ಬೀದಿ, ಧಾರವಾಡ.
- ಪಾರ್ವತಮ್ಮ ಚಂದ್ರಣ್ಣ. (2011). ಉಳಿವಿ ಶಿಖರದ ಶಿವಶರಣರು. ಶ್ರೀ ಚೆನ್ನಬಸವೇಶ್ವರ ಟ್ರಸ್ಟ್, ಉಳುವಿ.
- ಕಲಬುರ್ಗಿ ಎಂ.ಎಂ. (1998). ಮಾರ್ಗ–3. ಕರ್ನಾಟಕ ಬುಕ್ ಏಜೆನ್ಸಿ, ಬೆಂಗಳೂರು.
- ಸುಂಕಾಪುರ ಎಂ.ಎಸ್. (1977). ಪರಮ ಮೂಲಜ್ಞಾನ ಷಟ್ಸ್ಥಲ. ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ.